ಕರ್ನಾಟಕ ವಿಧಾನಸಭೆ

72ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ)
ಇಂಧನ ಸಚಿವರು.

****

ಅ) ಗುಂಡ್ಲುಪೇಟೆ ತಾಲ್ಲೂಕು ಕಬ್ಬಹಳ್ಳಿ ಗ್ರಾಮದ 66/11 ಕೆ.ವಿ. ವಿದ್ಯುತ್ ಮಂಜೂರಾಗಿದೆಯೇ;

393.02 ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಈ ಯೋಜನೆಗೆ ಅನುಮೋದನೆ ನೀಡಲಾಗಿದೆ.

ಆ) ತೆರಕಣಾಂಬಿ ಗ್ರಾಮದ 33/11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು 66/11 ಕೆ.ವಿ. ಉಪಕೇಂದ್ರವಾಗಿ ಮೇಲ್ದರ್ಜೆಗೇರಿಸಲು ಮಂಜೂರಾತಿ ನೀಡಲಾಗಿದೆಯೇ;

620.14 ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಈ ಯೋಜನೆಗೆ ಅನುಮೋದನೆ ನೀಡಲಾಗಿದೆ.

ಇ) ಹಾಗಿದ್ದಲ್ಲಿ, ಈ ವಿದ್ಯುತ್ ಉಪಕೇಂದ್ರ ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು?

2009-10 ರ ಸಾಲಿನಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಸಂಖ್ಯೆ: ಇಎನ್ 10 ಪಿಪಿಎಂ 2009

(ಕೆ.ಎಸ್.ಈಶ್ವರಪ್ಪ)
ಇಂಧನ ಸಚಿವರು.

ಕರ್ನಾಟಕ ವಿಧಾನಸಭೆ

73 ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್

(ಗುಂಡ್ಲುಪೇಟೆ)

ಅ) ಗುಂಡ್ಲುಪೇಟೆ ಪಟ್ಟಣದಿಂದ ಹಂಗಳ ಗ್ರಾಮಕ್ಕೆ ನದಿ ಮೂಲದಿಂದ ಕುಡಿಯುವ ನೀರು ಒದಗಿಸುವ ಯೋಜನೆಗೆ ಸರ್ಕಾರದ ಮಂಜೂರಾತಿ ದೊರೆತಿದೆಯೇ?

ರೂ.130.50ಲಕ್ಷ ಅಂದಾಜು ಮೊತ್ತದ ಈ ಯೋಜನೆಗೆ ಆಗಸ್ಟ್ 2007ರಲ್ಲಿ ಮಂಜೂರಾತಿ ನೀಡಲಾಗಿದೆ.

ಆ) ಈ ಯೋಜನೆಗೆ ಮಂಜೂರಾತಿ ನೀಡುವಾಗ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯವರು ತಿಳಿಸಿದ ಮೊತ್ತಕ್ಕೆ ಮಂಜೂರಾತಿ ನೀಡದಿರುವುದರಿಂದ ಯೋಜನೆ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಪುನಃ ದಿನಾಂಕ:12–03–2008ರಲ್ಲಿ ರೂ.182.86ಲಕ್ಷ ಮೊತ್ತದ ಪರಿಷ್ಕೃತ ಯೋಜನೆಗೆ ಒಪ್ಪಿಗೆ ನೀಡಿ KUWS & DB ಯೋಜನೆ ಕಾರ್ಯಗತಗೊಳಿಸಿದಾಗ ತಗಲುವ ವಾಸ್ತವಿಕ ವೆಚ್ಚ ಆಧರಿಸಿ ಅನುದಾನ ಬಿಡುಗಡೆ ಮಾಡುವುದಾಗಿ ತಿಳಿಸಲಾಗಿದೆ. ಆದರೂ ಈ ಯೋಜನೆಯ ಅನುಷ್ಠಾನದಲ್ಲಿ KUWS & DB ಯತಿಯಿಂದ ವಿಳಂಬವಾಗುತ್ತಿರುವುದು ಕಂಡು ಬಂದಿದೆ.

ಇ) ಈ ಯೋಜನೆಯನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಕೈಗೊಂಡಿರುವ ಕ್ರಮಗಳೇನು?

KUWS & DB ಗೆ ತ್ವರಿತವಾಗಿ ಯೋಜನೆಯ ಕಾಮಗಾರಿಯನ್ನು ಅನುಷ್ಠಾನ ಗೊಳಿಸಲು ತಿಳಿಸಿದೆ. ದಿನಾಂಕ:20–05–2008ರಲ್ಲಿ ಕರೆಯಲಾಗಿದ್ದ ಟೆಂಡರ್‌ಗೆ ಗುತ್ತಿಗೆದಾರರು ಹೆಚ್ಚಿನ ದರ ನಮೂದಿಸಿದ ಕಾರಣ, ಟೆಂಡರ್ ರದ್ದು ಪಡಿಸಿ, ದಿನಾಂಕ:06–02–2009ರಂದು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.

A) Whether the approval has been accorded by Government for the drinking water supply scheme to Hangala village from Gundlupet Town based on the river source;

Approval has been accorded to Rs.130.50lakh estimate during August 2007, for this scheme.

B) Has come to the notice of Government that there is delay on account of non-sanctioning of this scheme to the estimated amount posed by KUWS & DB;

While agreeling again to the revised cost estimate of Rs.182.86 lakh on 12-03-2008, KUWS & DB has been Informed that actual amount will be released when the scheme is commissioned. However, it is noticed that there is delay from KUWS & DB.

C) What are the measures initiated, to speed up the implementation of this scheme?

KUWS & DB has been informed to expedite the scheme works. Since the bid amount was on higher side against the tender, Tender has been cancelled and short term tender has been called for on 06-02-2009.

ಸಂ.ಗ್ರಾಅಪ 16 ಗ್ರಾನೀಸ(1)09

(ಶೋಭಾ ಕರಂದ್ಲಾಜೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

(13ನೇ ವಿಧಾನ ಸಭೆ. 2ನೇ ಅಧಿವೇಶನ)

75 ಶ್ರೀ ಮಂಜು.ಎ (ಅರಕಲಗೂಡು)

ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು

ಅ) ಹಾಸನ ಜಿಲ್ಲೆಯ ಅರಕಲಗೂಡು ಹಾಗೂ ಹೊಳೇನರಸೀಪುರ ತಾಲ್ಲೂಕುಗಳಲ್ಲಿ 2007–08ನೇ ಸಾಲಿಗೆ ಮಂಜೂರು ಮಾಡಲ್ಪಟ್ಟ ಆಶ್ರಯ ಮನೆಗಳೆಷ್ಟು (ವಿವರಗಳನ್ನು ಒದಗಿಸುವುದು);

2007–08ನೇ ಸಾಲಿಗೆ ರಾಜ್ಯ ಸರ್ಕಾರವು ಆಶ್ರಯ ಯೋಜನೆಯಡಿ ಗುರಿಯನ್ನು ನೀಡಿರುವುದಿಲ್ಲ. ಆದರೆ, 2007–08ನೇ ಸಾಲಿನ ಆರ್ಥಿಕ ವರ್ಷದಲ್ಲಿ ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ ಹಿಂದಿನ ಶ್ರೇಣಿಯಲ್ಲಿ ಪ್ರಗತಿಯಲ್ಲಿದ್ದ 1669 ಮನೆಗಳನ್ನು ಪೂರ್ಣಗೊಳಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

2007–08ನೇ ಆರ್ಥಿಕ ವರ್ಷದಲ್ಲಿ ಹೊಳೇನರಸೀಪುರ ಮನೆಗಳು			
ಯೋಜನೆ	ಅರಕಲಗೂಡು	ಹೊಳೆನರಸೀಪುರ	ಒಟ್ಟು
ಗ್ರಾಮೀಣ ಆಶ್ರಯ	955	714	1669

ಆ) ಹಾಗಿದ್ದಲ್ಲಿ, ಬಡ ಫಲಾನುಭವಿಗಳಿಗೆ ನೀಡಲಾದ ಆಶ್ರಯ ಮನೆಗಳೆಷ್ಟು; ಈ ಮೇಲ್ಕಂಡ ಎಲ್ಲಾ ಮನೆಗಳನ್ನೂ ಬಡವರಿಗಾಗಿಯೇ ನೀಡಲಾಗಿದೆ.

ಇ) ಆಶ್ರಯ ಯೋಜನೆಯಡಿಯಲ್ಲಿ ಮಂಜೂರಾಗಿ ಪೂರ್ಣಗೊಂಡಿರುವ ಮನೆಗಳ ಸಂಖ್ಯೆ ಎಷ್ಟು ಹಾಗೂ ರದ್ದುಪಡಿಸಿರುವ ಮನೆಗಳ ಸಂಖ್ಯೆ ಎಷ್ಟು?